OS No.187 /2014   DW-2

ದಿನಾಂಕಃ **21-01-2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎನ್ ಜಿ ವಕೀಲರಿಂದಃ

1. ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸಹಿ ಮಾಡುತ್ತೇನೆ. ಆದರೆ ಕನ್ನಡ ಭಾಷೆ ಓದಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆ ಮೇರೆಗೆ ತಯಾರಿಸಿರುತ್ತಾರೆ. ಎನ್.ಟಿ.ತಿಮ್ಮಯ್ಯ ಬಿನ್ ತಿಮ್ಮಯ್ಯ ಎಂದರೆ ನನ್ನ ತಂದೆ. ನಾನು ಸುಮಾರು 8 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ಅದಕ್ಕಿಂತ ಪೂರ್ವದಲ್ಲಿ ನನ್ನ ಮದುವೆಯಾದ ಸಮಯದಿಂದ ನಾನು ನನ್ನ ಹೆಂಡತಿಯ ಊರಾದ ತಗ್ಗಿಹಳ್ಳಿಯಲ್ಲಿ ವಾಸವಿರುತ್ತೇನೆ. ನನಗೆ ಸುಮಾರು 30 ವರ್ಷಗಳ ಹಿಂದೆ ಮದುವೆಯಾಗಿರುತ್ತದೆ , ಆದರೆ ಯಾವ ವರ್ಷದಲ್ಲಿ ಮದುವೆಯಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನನ್ನ ಮದುವೆಯನ್ನು ನಾನೇ ಮಾಡಿಕೊಂಡಿರುತ್ತೇನೆ.

2. ನನ್ನ ತಂದೆ ಸುಮಾರು 30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ , ಆದರೆ ದಿನಾಂಕ ಹೇಳಲು ಆಗುವುದಿಲ್ಲ. ನನ್ನ ತಾಯಿಯ ಊರು ಬೆಳವಂಗಳದ ಹತ್ತಿರ ಸಂಗಸನಹಳ್ಳಿ, ನನ್ನ ತಾಯಿ ಮದುವೆಯಾದ ದಿನದಿಂದ ತವರುಮನೆಯಲ್ಲೆ ವಾಸವಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ. ನನ್ನ ತಾಯಿ ಸುಮಾರು 15 ವರ್ಷಗಳ ಕಾಲ ನನ್ನ ತಂದೆಯೊಂದಿಗೆ ವಾಸವಾಗಿದ್ದರು. ನಾನು ನನ್ನ ಮದುವೆಯಾದ ನಂತರ ನಾನು ಮತ್ತು ನನ್ನ ತಾಯಿ ನನ್ನ ಹೆಂಡತಿ ಊರಿಗೆ ಹೋಗಿರುತ್ತೇವೆ. ನಾನು 1966-67 ರಲ್ಲಿ ಜನಿಸಿರುತ್ತೇನೆ. ಆದರೆ ನಿಖರವಾದ ದಿನಾಂಕ ಗೊತ್ತಿರುವುದಿಲ್ಲ. ನನಗೆ 26 ವರ್ಷ ವಯಸ್ಸಿನಲ್ಲಿ ಮದುವೆಯಾಗಿರುತ್ತದೆ.

3. ನನ್ನ ತಾಯಿ ಮದುವೆಯಾದ ದಿನದಿಂದ ಅವರ ತವರು ಮನೆಯಲ್ಲೆ ವಾಸವಾಗಿದ್ದು , ಲಿಂಗಜ್ಜನ ಪಾಳ್ಯಾದಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿ. ನಾನು ನನ್ನ ತಾಯಿಯೊಂದಿಗೆ ವಾಸವಾಗಿದ್ದೆನು ಎಂದರೆ ಸರಿ. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ಮಾಡಿದ್ದಂತಹ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

4. ವಾದಿ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಯಾವ ಕಾರಣಕ್ಕಾಗಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ 5 ನೇ ಪ್ರತಿವಾದಿಯ ಹೇಳಿಕೆ ಮೇರೆಗೆ ನೀವು ನಿಮ್ಮ ಸಾಕ್ಷಿ ಹೇಳಿಕೆ ಪ್ರಮಾಣ ಪತ್ರವನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಾನೇ ಹೇಳಿ ಬರೆಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನೀವು ನಿಮ್ಮ ತಾಯಿಯೊಂದಿಗೆ ವಾಸವಾಗಿದ್ದ ಕಾರಣ ನಿಮಗೆ ಮತ್ತು ವಾದಿಗೆ ಸಂಪರ್ಕ ಇರಲಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರು ಬೇರೆ ಹೋಗಿರುತ್ತಾರೆ , ಆದ್ದರಿಂದ ಅವರ ಸಂಪರ್ಕ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ಅವರ ಸಂಪರ್ಕ ಇಲ್ಲದೇ ಇದ್ದ ಕಾರಣ ಅವರ ಜೊತೆ ಮಾತುಕತೆ ಮತ್ತು ವ್ಯವಹಾರ ಇರುವುದಿಲ್ಲ ಎಂದರೆ ಸರಿ.

5. ನಾನು ನನ್ನ ತಾಯಿಯ ಜೊತೆ ಇದ್ದ ಕಾರಣ ನನ್ನ ತಂದೆಯ ಸ್ವಾಧೀನದಲ್ಲಿದ್ದ ಎಲ್ಲಾ ಆಸ್ತಿಗಳನ್ನು ವಾದಿಯೇ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆಯ ದೊಡ್ಡ ಹೆಂಡತಿಗೆ ವಾದಿ ಒಬ್ಬನೇ ಮಗ ಎಂದರೆ ಸರಿ. ನನ್ನ ತಂದೆ ಖರೀದಿ ಮಾಡಿದ ಆಸ್ತಿಗಳು ಮತ್ತು ಪಿತ್ರಾರ್ಜಿತ ಆಸ್ತಿಗಳು ಎಲ್ಲವನ್ನೂ ವಾದಿಯೇ ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿ. ನಿಮ್ಮ ತಂದೆ ಎಲ್ಲಿ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂಬ ಮಾಹಿತಿ ನಿಮಗೆ ಇಲ್ಲ ಎಂದರೆ ಸರಿ.

6. ನನಗೆ ದಾವಾ ಸ್ವತ್ತುಗಳಲ್ಲಿ ಮತ್ತು ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಯ ಮೇಲಿನ ದ್ವೇಷದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ